ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/163/ಇಸಿಎಸ್(3)/2018

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 09.04.2019.

**ಸುತ್ತೋಲೆ**

ವಿಷಯ : ಸಕಾಲ ಸೇವೆಗಳನ್ನು ಸೇವಾ ಸಿಂಧು ಯೋಜನೆಯ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ.

ಉಲ್ಲೇಖ : ಸರ್ಕಾರಿ ಆದೇಶ ಸಂಖ್ಯೆ: ಇಡಿ 11 ಇಜಿಒವಿ 2019 ಬೆಂಗಳೂರು, ದಿನಾಂಕ: 07.03.2019

*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಈ ಕೆಳಕಂಡ ಸೇವೆಗಳನ್ನು ಸಕಾಲ (Offline) ಸೇವೆಯಡಿ ನೀಡಲಾಗುತ್ತಿದೆ.

1. ಡಿಪ್ಲೊಮಾ ಪ್ರಮಾಣ ಪತ್ರ ನೀಡುವುದು.
2. ಡಿಪ್ಲೊಮಾ ಅಂಕಪಟ್ಟಿ ನೀಡುವುದು.
3. ಅಂಕಪಟ್ಟಿ ತಿದ್ದುಪಡಿ/ಕ್ರೋಢೀಕೃತ ಅಂಕಪಟ್ಟಿ ನೀಡುವುದು.
4. ಅರ್ಹತಾ ಪ್ರಮಾಣ ಪತ್ರ ನೀಡುವುದು.
5. ವಲಸೆ ಪ್ರಮಾಣ ಪತ್ರ ನೀಡುವುದು.
6. ಪಠ್ಯಕ್ರಮ ದೃಢೀಕರಿಸಿ ನೀಡುವುದು.
7. ಅಂಕಪಟ್ಟಿ/ಡಿಪ್ಲೊಮಾ ಪ್ರಮಾಣ ಪತ್ರಗಳ ನೈಜತೆ ಪ್ರಮಾಣ ಪತ್ರ ನೀಡುವುದು.
8. ಉತ್ತರ ಪತ್ರಿಕೆ ಫೋಟೋ ಪ್ರತಿ ನೀಡುವುದು.
9. ಉತ್ತರ ಪತ್ರಿಕೆ ಮರು ಮೌಲ್ಯಮಾಪನ ಮಾಡುವುದು.
10. ಡ್ಯೂಪ್ಲಿಕೇಟ್ ಪ್ರಮಾಣ ಪತ್ರ/ಅಂಕಪಟ್ಟಿ ನೀಡುವುದು.

ಉಲ್ಲೇಖದ ಸರ್ಕಾರಿ ಆದೇಶದಲ್ಲಿ ಮೇಲ್ಕಂಡ ಸೇವೆಗಳನ್ನು ನೀಡಲು ಆನ್‌ಲೈನ್ ತಂತ್ರಾಂಶದ (ಸೇವಾ ಸಿಂಧು) ಬಳಕೆಯನ್ನು ಕಡ್ಡಾಯ ಮಾಡುವ ಬಗ್ಗೆ ಆದೇಶ ನೀಡಲಾಗಿದೆ. ಇನ್ನುಮುಂದೆ ಮೇಲ್ಕಂಡ ಸೇವೆಗಳನ್ನು ಪಡೆಯಲು ಆನ್‌ಲೈನ್ ತಂತ್ರಾಂಶದ (ಸೇವಾ ಸಿಂಧು) ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

ಸೇವಾ ಸಿಂಧು ಯೋಜನೆಯಡಿಯಲ್ಲಿ ಸೇವೆಗಳನ್ನು ನೀಡಲು ಪ್ರತಿ ಸಂಸ್ಥೆಗೆ ಪ್ರತ್ಯೇಕ USERNAME & PASSWORD ಅನ್ನು ನೀಡಲಾಗಿದೆ. ಅದನ್ನು ಬಳಸಿ ಸೇವಾ ಸಿಂಧು ವೆಬ್‌ಪೋರ್ಟಲ್‌ನಲ್ಲಿ LOGIN ಆಗಿ ಪ್ರತಿ ಸಂಸ್ಥೆಯ ಪ್ರಾಚಾರ್ಯರು MOBILE NUMBER (Aadhar Linked) ಹಾಗೂ E-MAIL ID ಗಳನ್ನು ನಮೂದಿಸಬೇಕಾಗಿರುತ್ತದೆ.

ಆದಕಾರಣ LOGIN ಆಗುವ ಸಲುವಾಗಿ ಅಗತ್ಯವಿರುವ USERNAME & PASSWORD ನ್ನು ಪಡಯಲು ಪ್ರಾಚಾರ್ಯರು ತಮ್ಮ ಸಂಸ್ಥೆಯ E-MAIL ಮೂಲಕ **prakashsjep@gmail.com** E-MAIL ID ಗೆ ಮನವಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ : ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.

ಪ್ರತಿ : ಇ-ಆಡಳಿತ – ಅಂತರ್ಜಾಲದಲ್ಲಿ ಪ್ರಕಟಿಸಲು.